(ಗೊಂದಲ)

ಶ್ರೀ ರಾಮಲಿಂಗಾರೆಡ್ಡಿ:.... ಹಳ್ಳಿಯ ಮಕ್ಕಳು ಒಳ್ಳೆಯ ರಿಸಲ್ಟ್ ತೆಗೆದುಕೊಂಡರೆ, ನಾವು ಅವರ ಬೆನ್ನು ತಟ್ಟುತ್ತೇವೆ.

ಅಧ್ಯಕ್ಷರು: ಆಯಿತು, ಈ ವಿಷಯವನ್ನು Close ಮಾಡೋಣ. ಮಾನ್ಯ ಗೋವಿಂದಕಾರಜೋಳರವರೆ, ನಿಮ್ಮ ವಿಷಯ ಪ್ರಸ್ತಾಪಿಸಿ.

(ಗೊಂದಲ)

ಅಧ್ಯಕ್ಷರು: ದಯಮಾಡಿ ನೀವು ಕುಳಿತುಕೊಳ್ಳಿ. ನಿಮಗೆ ಕ್ಲಾರಿಫಿಕೇಷನ್ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಬೇರೆ ಸದಸ್ಯರುಗಳು ಸಹ ತಮ್ಮ ಭಾವನೆಗಳನ್ನು ವ್ಯಕ್ತಮಾಡಿದ್ದಾರೆ. ಮಾನ್ಯ ಮಂತ್ರಿಗಳು ಅದರ ಬಗ್ಗೆ ಉತ್ತರ ಹೇಳಿದ್ದಾರೆ. ಮತ್ತೇನಿದು? ಮಾನ್ಯ ಗೋವಿಂದಕಾರಜೋಳ್‌ರವರೆ, ನಿಮ್ಮ calling attentionಪ್ರಸ್ತಾಪಿಸಿ.

(ಗೊಂದಲ)

ಶ್ರೀ ನರಸಿಂಹ ನಾಯಕ್ (ರಾಜೂಗೌಡ):– ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಕಾಲಾವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಆಯಿತು, ನೋಡೋಣ. ಅದನ್ನು ಬೇರೆ ರೂಪದಲ್ಲಿ ಕಳುಹಿಸಿ. ಅದನ್ನು ಚರ್ಚೆ ಮಾಡುವುದಕ್ಕೆ ನಾನು ಅವಕಾಶ ಮಾಡಿಕೊಡುತ್ತೇನೆ.

2. ವಿಷಯ: ಮುಧೋಳ ಬಸ್ ಸ್ಟ್ಯಾಂಡ್ ಹತ್ತಿರ ವಾಸವಾಗಿರುವ ಬಡವರು, ಹರಿಜನರು ಮತ್ತು ಗೊಲ್ಲರಿಗೆ ಪಟ್ಟಾ ಹಕ್ಕುಪತ್ರ ನೀಡುವ ಬಗ್ಗೆ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ): ಮಾನ್ಯ ಅಧ್ಯಕ್ಷರೆ, ಮುಧೋಳ ಬಸ್ ಸ್ಟ್ಯಾಂಡ್ ಹತ್ತಿರ ವಾಸವಾಗಿರುವ ಬಡವರು, ಹರಿಜನರು ಮತ್ತು ಗೊಲ್ಲರಿಗೆ ಪಟ್ಟಾ ನೀಡದೆ ತೊಂದರೆಯಾಗಿರುವುದರಿಂದ, ಪಟ್ಟಾ ಹಕ್ಕುಪತ್ರ ನೀಡುವ ಬಗ್ಗೆ ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್.ಆರ್. ಮೋರೆ(ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು):– ಮಾನ್ಯ ಅಧ್ಯಕ್ಷರೆ, ಮುಧೋಳ ಪಟ್ಟಣದ ಬಸ್ ಸ್ಟ್ಯಾಂಡ್ ಹತ್ತಿರ ಬಡವರು, ಹರಿಜನರು, ಗೊಲ್ಲರು ಮತ್ತಿತರ ಸುಮಾರು 350 ಕುಟುಂಬದವರು ಸುಮಾರು ವರ್ಷಗಳಿಂದ ವಾಸವಾಗಿರುತ್ತಾರೆ. ಮುಧೋಳ ಪುರಸಭೆಯು ಈ ಕುಟುಂಬಗಳಿಗೆ ಕುಡಿಯುವ ನೀರು, ಬೀದಿ ದೀಪ ರಸ್ತೆ ಇತ್ಯಾದಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿರುತ್ತದೆ. ಸದರಿ ಜಾಗವು ಕಂದಾಯ ಇಲಾಖೆಗೆ ಸೇರಿದ್ದು, ಪುರಸಭೆಗೆ

ವರ್ಗಾಯಿಸುವಂತೆ ಮುಧೋಳ ಪುರಸಭೆಯು ಈಗಾಗಲೇ ಕಂದಾಯ ಇಲಾಖೆಯನ್ನು ಕೋರಿರುತ್ತದೆ. ಈ ಪ್ರಕರಣವು ಪ್ರಸ್ತುತ ಕಂದಾಯ ಇಲಾಖೆಯ ಪರಿಶೀಲನೆಯಲ್ಲಿದ್ದು, ಕಂದಾಯ ಇಲಾಖೆಯಿಂದ ಸದರಿ ಜಾಗವು ಪುರಸಭೆಗೆ ವರ್ಗಾವಣೆಗೊಂಡ ಕೂಡಲೇ ಮೇಲ್ಕಂಡ ಕುಟುಂಬಗಳಿಗೆ ಪಟ್ಟಾ ಹಕ್ಕುಪತ್ರ ನೀಡಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ಈ ಜನಾಂಗದವರು ಕಳೆದ ಮುನ್ನೂರು ವರ್ಷಗಳಿಂದ ಅಲ್ಲಿ ವಾಸವಾಗಿದ್ದಾರೆ. ಬಿಜಾಪುರ ರಾಜರಾಗಿದ್ದ ಆದಿಲ್ ಶಾಹಿರವರು ಮುಧೋಳ ಮಹಾರಾಜರಿಗೆ ಮುಧೋಳ ಸಂಸ್ಥಾನವನ್ನು ಉಂಬಳಿಯಾಗಿ ಕೊಟ್ಟ ಸಮಯದಿಂದ ಈ ಜನ ಅಲ್ಲಿದ್ದಾರೆ. ಮುನ್ನೂರು ವರ್ಷಗಳಾದರೂ ಆ ಜನರಿಗೆ ಹಕ್ಕುಪತ್ರಗಳನ್ನು ಕೊಡಲಿಕ್ಕೆ ನಮ್ಮ ಸರ್ಕಾರದಿಂದ ಆಗಲಿಲ್ಲ, ಅದಕ್ಕಾಗಿ ನಾನೇನು ವಿನಂತಿ ಮಾಡಿಕೊಳ್ಳುತ್ತೇನೆ ಎಂದರೆ, ಈಗಾಗಲೇ ಅಲ್ಲಿ CTS number ಬಿದ್ದಿದೆ. 2004ನಿಂದ 2500ರವರೆಗೆ CTS number ಇವೆ. ಅವರು ಅಲ್ಲಿ ನೂರಾರು ವರ್ಷಗಳಿಂದ ಇದ್ದಾರೆ. ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅದಕ್ಕಾಗಿ ದಯಮಾಡಿ ಅವರಿಗೆ ಹಕ್ಕುಪತ್ರ ಕೊಡಲಿಕ್ಕೆ ನಿರ್ದಿಷ್ಟವಾದಂತಹ ಆದೇಶವನ್ನು ಕೊಡಿ. ಕಂದಾಯ ಇಲಾಖೆ ವ್ಯಾಪ್ತಿಯಲ್ಲಿ ಅದೀಗ ಉಳಿದಿಲ್ಲ. ಈಗ ಅದು ಸರ್ಕಾರದ ಜಾಗವಾಗಿರುವುದರಿಂದ ಅದು CTS numberಹಾಕಿ ಪುರಸಭೆ ವ್ಯಾಪ್ತಿಗೆ ಬಂದಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಎಷ್ಟು ದಿವಸಗಳಲ್ಲಿ ಅವರಿಗೆ ಹಕ್ಕುಪತ್ರಗಳನ್ನು ಕೊಡುತ್ತೀರಿ ಎಂಬುದನ್ನು ದಯಮಾಡಿ ತಾವು ಈ ಸದನಕ್ಕೆ ತಿಳಿಸಬೇಕು ಎಂದು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಆರ್.ಮೋರೆ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ, CTS number ಬಿದ್ದಿದೆ. ಆದರೆ ಇದು ಗ್ರಾಮಠಾಣ ಜಾಗವೂ ಕೂಡ ಇರುತ್ತದೆ. ಈಗಾಗಲೇ ಅಲ್ಲಿರತಕ್ಕಂಥ ಪುರಸಭೆಯವರು AC ಗೆ ಬರೆದಿದ್ದಾರೆ. ನಾನು ಬೆಳಿಗ್ಗೆ ಕೂಡ AC ಯವರೊಂದಿಗೆ ಮಾತನಾಡಿದ್ದೇನೆ. ಇನ್ನು ಎರಡು ತಿಂಗಳೊಳಗಾಗಿ ನಾವು ಪಟ್ಟಾ ಹಕ್ಕುಪತ್ರಗಳನ್ನು ಹಂಚಲು ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಒಂದೇ ಒಂದು ನಿಮಿಷ. ನಾನು ಜಾಸ್ತಿ ಹೊತ್ತು ತೆಗೆದುಕೊಳ್ಳುವುದಿಲ್ಲ. ಚಾಮರಾಜನಗರದಲ್ಲಿ....

ಅಧ್ಯಕ್ಷರು: ಎಲ್ಲಾ ಮುಗಿದು ಹೋಯಿತಲ್ಲಾ,

ವಿಷಯ: ಚಾಮರಾಜನಗರ ಜಿಲ್ಲಾಧಿಕಾರಿಯವರ ವರ್ಗಾವಣೆ ರದ್ದುಪಡಿಸಿ ಅವರನ್ನು ಅಲ್ಲೇ ಮುಂದುವರೆಸುವ ಕುರಿತು.